# ಗುರುದೇವ



ಇಂದು ರವಿತಾರೆ ಹಿಮಗಿರಿ ಗಂಗೆ ಗೋದಾ ಸಿಂಧು ಶುಭ ಜಲ ನಿಧಿಗಳೆಲ್ಲವು
ಚಂದದಲಿ ಮೆರೆವನ್ನೆಗಂ ಬಂದ "ಶ್ರೀ ಗುರುದೇವ" ಪೊರೆಯಲಿ ಶಿಷ್ಯ ಬಳಗವನು

ಧಾರ್ಮಿಕ ಮಾಸಿಕ ಪತ್ರಿಕೆ

ಶ್ರೀ ಹೊಂಬುಜ ಅತಿಶಯ ಮಹಾಕ್ಷೇತ್ರ ಶ್ರೀ ವೀರನಿರ್ವಾಣ ಶಕವರ್ಷ 2551/ಶ್ರೀ ಕ್ರೋಧಿ ನಾಮ ಸಂವತ್ಸರ
15-02-2025 ಮಾಘ ಮಾಸ : ಶುಕ್ಲ ಪಕ್ಷ ಶನಿವಾರ

ಪುಟ : ೪ ಸಂಪುಟ : ೭೧ ಸಂಚಿಕೆ : ೦೨
RNI No. 13248/57-POSTEL REGD No. KA/SK/SMG 198/2024-26

ಪರಮ ಸಂರಕ್ಷಕರು, ಸ್ವಾಮಿತ್ವ, ಪ್ರಧಾನ ಸಂಪಾದಕರು : ಜಗದ್ಗುರು ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರು, ಶ್ರೀಕ್ಷೇತ್ರ ಹೊಂಬುಜ

ಶ್ರೀ ಕ್ಷೇತ್ರ ಹೊಂಬುಜ



ಭಗವಾನ್ ಶ್ರೀ ಪಾರ್ಶ್ವನಾಥ ಸ್ವಾಮಿ





ಜಗನ್ಮಾತೆ ಶ್ರೀ ಪದ್ಮಾವತಿ ದೇವಿ

ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ

## ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳವರು

**ಶುಭಾಶೀರ್ವಚನ** ಶ್ರೀ ಕ್ಷೇತ್ರ ಹೊಂಬುಜ

## ರಥೋತ್ಸವ ಹಿನ್ನೆಲೆ

ಸಾಲೋಥ ವೇದಿ-ರಥವೇದಿರಥೋಪಿ ಸಾಲೋ । ವೇದಿಶ್ವಸಾಲ ಇಹ ವೇದಿ ರಥೋಪಿ ಸಾಲಃ ॥
ವೇದಿಶ್ವ ಭಾತಿ ಸದಸಿ ಕ್ರಮತೋಯದೀಯೇ । ತಸ್ಮೈ ನಮಸ್ತ್ರಿಭುವನ ಪ್ರಭವೇ ಜಿನಾಯ ॥

ಮಾನವ ಸಮಾಜದಲ್ಲಿ ನಡೆದು ಬಂದಿರುವ ಸಂಸ್ಕೃತಿ ಪರಿಚಯ ಕಾರ್ಯಗಳಲ್ಲಿ ರಥಯಾತ್ರೆಯೂ ಒಂದು. ಪ್ರತಿಯೊಂದು ಕ್ರಿಯೆಗೂ ಧಾರ್ಮಿಕ ಹಿನ್ನಲೆ ಹೊಂದಿರುವುದು. ಬಹುಶಃ ನಮ್ಮ ಭಾರತೀಯರಲ್ಲಿ ಮಾತ್ರವಿರಬಹುದು. ಸಾಮಾಜಿಕವಾಗಲಿ ಪರಿವಾರದ ಒಳತಿಗಾಗಲಿ ಎಲ್ಲವನ್ನೂ ಧಾರ್ಮಿಕತೆಯ ಚೌಕಟ್ಟಿನಲ್ಲಿ ನೋಡುವುದು ಪರಿಪಾಟಿ. ಅಂತೆಯೇ ವಿಶೇಷವಾಗಿ 'ರಥಯಾತ್ರೆ' ಯು ಜನರ ಜಾತ್ರೆಯ ನಡುವೆ ಉತ್ಸಾಹದೊಂದಿಗೆ ಜರುಗುವ ಸಂಭ್ರಮೋತ್ಸವ ವಾಗಿದೆ. ಸಾಮಾಜಿಕವಾಗಿ ಗಮನಿಸಿದಾಗ ಎಲ್ಲಾ ವರ್ಗದ ಜನರು ಭೇದ-ಭಾವ ಮರೆತು ಭಗವಂತನ ಸೇವೆ-ಭಕ್ತಿ ಮಾಡುವುದಕ್ಕೆ ಸಿಕ್ಕ ಅವಕಾಶವೆಂದು ಪುಳಕಿತರಾಗುತ್ತಾರೆ.

WWW.HOMBUJAPADMAVATI.ORG

ಜೈನ ಧರ್ಮಾನುಸಾರ "ರಥಯಾತ್ರೆ" ಯನ್ನು ಶಾಸ್ತ್ರೋಕ್ತವಾಗಿ ಹೇಳಬೇಕೆಂದರೆ ಅದನ್ನು "ಶ್ರೀವಿಹಾರ" ವೆಂದು ಕರೆಯುತ್ತಾರೆ. 'ಶ್ರೀ' ಎಂದರೆ ಸಾಮಾನ್ಯ ಅರ್ಥದಲ್ಲಿ 'ಲಕ್ಷ್ಮಿ' ನಮ್ಮ ಜೈನಧರ್ಮಾನುಸಾರ 'ಶ್ರೀ' ಎಂದರೆ ಯಾರು ಕೇವಲಜ್ಞಾನವೆಂಬ ಜ್ಞಾನಜ್ಯೋತಿಯನ್ನು ಹೊಂದಿರುತ್ತಾರೆಯೋ ಅವರು ಅರಿಹಂತರು ಅಥವಾ ಮುಕ್ತಿ (ಮೋಕ್ಷ) ಲಕ್ಷ್ಮೀಯನ್ನು ಯಾರು ಗಳಿಸಿರುತ್ತಾರೆಯೋ ಅವರಿಗೆ "ಶ್ರೀಜಿನ ಪರಮೇಶ್ವರ" ಎಂದು ಮನ್ನಿಸುತ್ತಾರೆ.

ವರ್ಷಂಪ್ರತಿ ಫಾಲ್ಗುಣ ಮಾಸದಲ್ಲಿ ರಥಯಾತ್ರೆ ಮಹೋತ್ಸವ ನೆರವೇರಿಸುವ ಸತ್‌ಸಂಪ್ರದಾಯವಿದೆ. 'ರಥೋತ್ಸವ' ಎಂದರೆ ಸಮವಸರಣದ ಪ್ರತೀಕ, ಜಿನಾಲಯಗಳ ಪ್ರತಿರೂಪವೂ ಹೌದು. ಶ್ರೀಜಿನಪೂಜೆಯನ್ನು ರಥಯಾತ್ರೆಯ ಶ್ರೀ ವಿಹಾರದ ಮೂಲಕ ನೆರವೇರಿಸಿ ಭಕ್ತವೃಂದದವರು ಧನ್ಯರಾಗುತ್ತಾರೆ. ಸಾಮರಸ್ಯ, ಶಾಂತಿ, ನೆಮ್ಮದಿ, ಸುಖ, ಆಯುರಾರೋಗ್ಯ ಸದಾ ಜೀವನದಲ್ಲಿ ಧಾರ್ಮಿಕ ನೆಲಗಟ್ಟಿನಲ್ಲಿ ಚಲಿಸುವಂತೆ ಶ್ರೀಮನ್ಮಹಾರಥೋತ್ಸವ ಸತ್‌ಪ್ರೇರಣೆ ನೀಡುವ ಧರ್ಮ ಸಂದೇಶವಿದೆ.

ರಥೋತ್ಸವ ವಿಧಿ-ವಿಧಾನಗಳು ಆಗಮೋಕ್ತ ಪದ್ಧತಿಯಂತೆ ಏರ್ಪಡಿಸಲಾಗುವುದು. ಸದ್ಧರ್ಮ ಬಂಧುವರ್ಗದವರು ತನು-ಮನ-ಧನ ಸಹಯೋಗ ನೀಡುತ್ತಾರೆ. ಧರ್ಮ ಪ್ರಭಾವನೆಯ ಮಹತ್ವದ ಅಂಗವಾಗಿದೆ. ಆತ್ಮಕಲ್ಯಾಣ ಧರ್ಮಪಥವನ್ನು ಅನುಕರಿಸಲು ಅತಿಶಯ ಶ್ರೀಕ್ಷೇತ್ರ ಹೊಂಬುಜದಲ್ಲಿ ರಾಜ್ಯದ ಮತ್ತು ದೇಶದ ವಿವಿದೆಡೆಯ ಸಮಾಜ ಬಾಂಧವರು ಶ್ರೀ ರಥೋತ್ಸವ ಶ್ರೀ ವಿಹಾರ ಧಾರ್ಮಿಕ ವಿಧಿ-ವಿಧಾನಗಳಲ್ಲಿ ತೊಡಗಿಸಿಕೊಳ್ಳುವುದು ಹೆಮ್ಮೆಯನ್ನುಂಟು ಮಾಡಿದೆ. ಈ ಸುಸಂದರ್ಭದಲ್ಲಿ ಧರ್ಮೋಪದೇಶವನ್ನು ಪ್ರಸಾರ ಮಾಡಲಾಗುವುದು. ವಿದ್ವಾಂಸರಿಂದ ಧರ್ಮ ಸಮಾವೇಶವನ್ನು ಏರ್ಪಡಿಸಲಾಗುವುದು. ಸಾಂಸ್ಕೃತಿಕ ಕಾರ್ಯಕ್ರಮಗಳಿಂದ ಜಿನಧರ್ಮಸಾರವನ್ನು ತಿಳಿಸಲಾಗುವುದು.

**40 ವರ್ಷಗಳ ನಂತರ ಶ್ರೀಕ್ಷೇತ್ರ ಹೊಂಬುಜ ಜೈನ ಮಠಕ್ಕೆ ಪರಮಪೂಜ್ಯ ಗಣಾಧಿಪತಿ, ಗಣಧರಾಚಾರ್ಯ ಶ್ರೀ 108 ಕುಂಥುಸಾಗರ ಮಹಾರಾಜರು ಮತ್ತು ಸಂಘಸ್ಥ ತ್ಯಾಗಿ ವೃಂದದವರು ಆಗಮಿಸಲಿದ್ದಾರೆ. ತಪಸ್ಸಿನ ಮೂಲಕ ಧರ್ಮಪ್ರಭಾವನೆ ಕಾರ್ಯವನ್ನು ಮಾಡುತ್ತಿರುವ ಆಚಾರ್ಯರ ಸಾನಿಧ್ಯದಲ್ಲಿ ಶ್ರೀಕ್ಷೇತ್ರದಲ್ಲಿ ಆರಾಧನೆ ಹಾಗೂ ಜಾತ್ರಾ ಮಹೋತ್ಸವ ಧರ್ಮ ಪ್ರಭಾವನಾ ಕಾರ್ಯಗಳು ನಡೆಯಲಿವೆ. ಶ್ರೀ ಪಾರ್ಶ್ವನಾಥ ಸ್ವಾಮಿ ಹಾಗೂ ಮಹಾಮಾತೆ ಶ್ರೀ ಪದ್ಮಾವತಿ ದೇವಿ ಸನ್ನಿಧಿಯಲ್ಲಿ ನೆರವೇರುವ ವಾರ್ಷಿಕ ರಥೋತ್ಸವ ಧಾರ್ಮಿಕ ವಿಧಿ-ವಿಧಾನಗಳಲ್ಲಿ ಧರ್ಮ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಯಾಗಿ ಪುಣ್ಯಪ್ರಾಪ್ತಿ ಮಾಡಿಕೊಳ್ಳುವಂತೆ ಅಪೇಕ್ಷೆ.**

## ದಿಗಂಬರ ಮುನಿದೀಕ್ಷೆ

ಶ್ರೀಕ್ಷೇತ್ರ ಹೊಂಬುಜ ಜೈನ ಮಠದಲ್ಲಿ ಮಾರ್ಚ್ 16, 2025ರಂದು ಪರಮಪೂಜ್ಯ ಆಚಾರ್ಯ ಶ್ರೀ ಗುಣಭದ್ರನಂದಿ ಮುನಿಮಹಾರಾಜರು ಬೆಳಗಾವಿಯ ಕೊಣ್ಣೂರಿನ ಬ್ರ. ಶ್ರೀ ಸೂರಜ್‌ರವರಿಗೆ ದಿಗಂಬರ ಮುನಿದೀಕ್ಷೆಯನ್ನು ನೀಡಲಿದ್ದಾರೆ. ಈ ಕಾರ್ಯಕ್ರಮಗಳಿಗೆ ಧರ್ಮ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕಾಗಿ ವಿನಂತಿ.

### ಶ್ರೀ ಪಾರ್ಶ್ವನಾಥ ತೀರ್ಥಂಕರ ಜನ್ಮಕಲ್ಯಾಣ ಪರ್ವಾಚರಣೆ

## "ಸಂಕಷ್ಟಗಳ ಪರಿಹಾರಕ್ಕಾಗಿ ಪಾರ್ಶ್ವನಾಥ ಸ್ತುತಿ ಸತ್ಫಲ ನೀಡಲಿ"

-ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



**ಹೊಂಬುಜ :** 'ಜೈನ ಧರ್ಮದ 24 ತೀರ್ಥಂಕರರ ಪುರಾಣಗಳಲ್ಲಿ ದೇವರ ಧ್ಯಾನ, ಸ್ತುತಿ, ಪೂಜಾ ಕೈಂಕರ್ಯಗಳ ಉಲ್ಲೇಖವಿದೆ. ಆದರೆ 23ನೇಯ ತೀರ್ಥಂಕರರಾಗಿರುವ ಶ್ರೀ 1008 ಪಾರ್ಶ್ವನಾಥ ಸ್ವಾಮಿಯವರ ಆರಾಧನೆಯಿಂದ ಜೀವನದ ವಿಘ್ನಗಳು, ಸಂಕಷ್ಟಗಳು ಪರಿಹಾರಗೊಳ್ಳುವುದು' ಎಂದು ಅತಿಶಯ ಶ್ರೀಕ್ಷೇತ್ರ ಹೊಂಬುಜ ಜೈನ ಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳವರು ಜ. 25ರ ಶನಿವಾರದಂದು ಶ್ರೀ ಪಾರ್ಶ್ವನಾಥ ತೀರ್ಥಂಕರರ ಜನ್ಮಕಲ್ಯಾಣ ಪರ್ವ ನಿಮಿತ್ತ ಪ್ರವಚನದಲ್ಲಿ ತಿಳಿಸಿದರು.

'ತಪಃ ಕಲ್ಯಾಣದ ಬಗ್ಗೆಯೂ ವಿವರಿಸುತ್ತಾ, ಭಕ್ತರ ಆಶಯಗಳಿಗೆ ನಿತ್ಯ ಧ್ಯಾನ, ಪೂಜೆ, ಜಿನಭಕ್ತಿ ಸ್ತುತಿಗಳು ಸತ್ಫಲ ನೀಡುವುದು ನಿಶ್ಚಿತ' ಎಂದು ಹರಸಿ, ಆಶೀರ್ವದಿಸಿದರು.

2ನೇ ಪುಟಕ್ಕೆ

### 5ನೇ ವಾರ್ಷಿಕ ಪೂಜಾ ಹಾಗೂ ಮಹಾಮಸ್ತಕಾಭಿಷೇಕ ಮಹೋತ್ಸವ

## "ಬಾಹುಬಲಿ ತತ್ವ ಸಿದ್ಧಾಂತಗಳು ಅಗತ್ಯ"

-ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



**ಚಳ್ಳಕೆರೆ:** 'ಭರತ ಖಂಡದಲ್ಲಿ ಶಾಂತಿ, ಅಹಿಂಸೆ, ಸಂಸ್ಕೃತಿ, ಸಂಸ್ಕಾರ, ಪರಂಪರೆಗಳ ಉಳಿವಿಗೆ ಭಗವಾನ್ ಬಾಹುಬಲಿ ತತ್ವ ಸಿದ್ಧಾಂತಗಳು ಸಮಾಜಕ್ಕೆ ಅತಿ ಅಗತ್ಯವಾಗಿದೆ' ಎಂದು ಶ್ರೀಕ್ಷೇತ್ರ ಹೊಂಬುಜ ಜೈನ ಮಠದ ಪರಮಪೂಜ್ಯ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳು ತಿಳಿಸಿದರು.

ಅವರು ಪಟ್ಟಣದ ಶ್ರೀ ಪಾರ್ಶ್ವನಾಥ ಜಿನಮಂದಿರ ಹಾಗೂ ಭಗವಾನ್ ಬಾಹುಬಲಿ ಸಮಾಜದ ವತಿಯಿಂದ ಶ್ರೀ ಮೈತ್ರಿಧಾಮ ಬಾಹುಬಲಿ ಮಹಾಸ್ವಾಮಿಯ 5ನೇ ವಾರ್ಷಿಕ ಪೂಜಾ ಹಾಗೂ ಮಹಾಮಸ್ತಕಾಭಿಷೇಕ ಮಹೋತ್ಸವದಲ್ಲಿ ಪಾವನ ಸಾನಿದ್ಯ ವಹಿಸಿ ಆಶೀರ್ವಚನ ನೀಡಿದರು.

'ಭಗವಾನ್ ಬಾಹುಬಲಿ ಮತ್ತು ಭರತ ಸಹೋದರರು ತಮ್ಮ ಭಿನ್ನಾಭಿಪ್ರಾಯಗಳನ್ನು ಮರೆತು ಸಮಾಜದ ಒಳಿತಿಗೆ ಶ್ರಮಿಸಿದರು. ಸಮಾಜ ಬಂದುಗಳು ಶುದ್ಧ ಮನಸ್ಸಿನಿಂದ ಭರತ-ಬಾಹುಬಲಿಯಂತೆ ಸಮಾಜದ ಒಳಿತಿಗೆ ಮಾದರಿಯಾಗಬೇಕು' ಎಂದರು.

2ನೇ ಪುಟಕ್ಕೆ

## "ಸಂಕಷ್ಟಗಳ ಪರಿಹಾರಕ್ಕಾಗಿ ಪಾರ್ಶ್ವನಾಥ ಸ್ತುತಿ ಸತ್ಫಲ ನೀಡಲಿ"

1ನೇ ಪುಟದಿಂದ

ಶ್ರೀ ಚಂದ್ರಪ್ರಭ ತೀರ್ಥಂಕರರ ತಪಃ ಕಲ್ಯಾಣ ಸುದಿನವೂ ಆಗಿರುವುದರಿಂದ ಶ್ರೀ ಚಂದ್ರಪ್ರಭ ತೀರ್ಥಂಕರರ ಉಪದೇಶಗಳನ್ನು ಶ್ರೀಗಳವರು ಪ್ರವಚನದಲ್ಲಿ ಮನನ ಮಾಡಿದರು.

ಶ್ರೀ 1008 ಪಾರ್ಶ್ವನಾಥ ಸ್ವಾಮಿ ಜಿನಮಂದಿರದಲ್ಲಿ ವಿಶೇಷ ಧಾರ್ಮಿಕ ವಿಧಿ-ವಿಧಾನಗಳು ನೆರವೇರಿದವು. ಜಗನ್ಮಾತೆ ಯಕ್ಷಿಶ್ರೀ ಪದ್ಮಾವತಿ ದೇವಿಯ ಸನ್ನಿಧಿಯಲ್ಲಿ ಜಿನಾಗಮೋಕ್ತ ವಿಧಿ ಜರುಗಿತು. ಪಲ್ಲಕ್ಕಿ ಉತ್ಸವ, ನಾಮಕರಣ ತೊಟ್ಟಿಲು ಸೇವೆ ನಡೆಯಿತು. ಶ್ರೀ ನೇಮಿನಾಥ ಸ್ವಾಮಿ, ಶ್ರೀ ಮಹಾವೀರ ಸ್ವಾಮಿ, ಶ್ರೀ ಕೂಷ್ಮಾಂಡಿನಿ ದೇವಿ, ಶ್ರೀ ಸರಸ್ವತಿ ದೇವಿ ಹಾಗೂ ಶ್ರೀಕ್ಷೇತ್ರಪಾಲ, ಶ್ರೀ ನಾಗಸನ್ನಿಧಿಯಲ್ಲಿ ಶ್ರೀಗಳವರ ಸಾನಿಧ್ಯದಲ್ಲಿ ನಿತ್ಯಪೂಜೆ ಸಲ್ಲಿಸಲಾಯಿತು. ಶ್ರೀಕುಂದಕುಂದ ವಿದ್ಯಾಪೀಠದ ವಿದ್ಯಾರ್ಥಿಗಳು, ಹುಂಚ ಶ್ರೀ ಪದ್ಮಾವತಿ ಮಹಿಳಾ ಮಂಡಳ ಶ್ರಾವಿಕೆಯರು, ರಾಜ್ಯ ಹಾಗೂ ಊರ ಪರವೂರ ಭಕ್ತರು ಶ್ರೀ ಪಾರ್ಶ್ವನಾಥ ಸ್ತೋತ್ರ ಪಠಿಸಿದರು.

1ನೇ ಪುಟದಿಂದ

## "ಬಾಹುಬಲಿ ತತ್ವ ಸಿದ್ಧಾಂತಗಳು ಅಗತ್ಯ"

ಭಗವಾನ್ ಬಾಹುಬಲಿ ದಿಗಂಬರ ಜೈನ್ ಟ್ರಸ್ಟ್ ಅಧ್ಯಕ್ಷ ಡಿ. ಭರತ್‌ರಾಜ್ ಸಮಾರಂಭದ ಅಧ್ಯಕ್ಷತೆ ವಹಿಸಿದರು. ಕಾರ್ಯಕ್ರಮದಲ್ಲಿ ಉದ್ಯಮಿ ಡಿ. ಅಂಬಣ್ಣ, ಡಾ. ವಿಜಯೇಂದ್ರ, ಡಿ.ಪ್ರಭಾಕರ್, ವಿಮುಕ್ತ, ನಾಗರಾಜು, ದರ್ಶನ್, ಸಚಿನ್, ಮಿಥುನ್, ಚೇತನ್, ಡಿ. ರತ್ನರಾಜು, ಸವಿತಾ ಡಿ. ಪಾರ್ಶ್ವನಾಥ್, ಜ್ವಾಲಾ ಡಿ. ಭರತ್ ರಾಜು, ಪದ್ಮ ಡಿ. ಅಂಬಣ್ಣ, ಚಳ್ಳಕೆರೆ ಜಿನವಾಣಿ ಮಹಿಳಾ ಸಂಘ, ಶ್ವೇತಾಂಬರ ಜೈನ ಸಮಾಜ, ವಧು ಮಂಡಲ್ ಸೇರಿದಂತೆ ಚಳ್ಳಕೆರೆ, ಚಿತ್ರದುರ್ಗ, ರಂಗಸಮುದ್ರ, ಹೊಸದುರ್ಗ, ಹೊಳಲ್ಕೆರೆ, ಅಮರಾಪುರ ಜೈನ ಬಂಧುಗಳು ಸೇರಿದಂತೆ ಶ್ರಾವಕ ಶ್ರಾವಕಿಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಬೆಳಗ್ಗೆ ಧ್ವಜಾರೋಹಣ, 108 ಕಳಸಗಳ ಅಭಿಷೇಕ ಹಾಗೂ ಮಹಾಮಸ್ತಕಾಭಿಷೇಕ, ಶಿಖರ್ಜಿ ಆರಾಧನೆ ಇನ್ನಿತರ ಕಾರ್ಯಕ್ರಮಗಳು ಜರುಗಿದವು. ಪುರೋಹಿತರಾದ ದಿವ್ಯ ಪಂಡಿತ್ ಹಾಗು ಪ್ರದೀಪ್ ಕುಮಾರ್ ಧಾರ್ಮಿಕ ವಿಧಿ ವಿಧಾನಗಳನ್ನು ನೆರವೇರಿಸಿದರು. ಗೌರಿಪುರ ಪಾರ್ಶ್ವನಾಥ ಕಾರ್ಯಕ್ರಮ ನಿರೂಪಿಸಿದರು.

### ವಿಶ್ವ ಶಾಂತಿ, ಭ್ರಾತೃತ್ವ ಧರ್ಮಸಂದೇಶ ಸಾರಿದ

## ಶ್ರೀ ಆದಿನಾಥ ತೀರ್ಥಂಕರರು ಪ್ರಾತಃಸ್ಮರಣೀಯರು

-ಪರಮಪೂಜ್ಯ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



WWW.HOMBUJAPADMAVATI.ORG

**ಹೊಂಬುಜ : "ಜೈನ ಧರ್ಮದ ಪ್ರಥಮ ತೀರ್ಥಂಕರ ಶ್ರೀ 1008 ಆದಿನಾಥ ತೀರ್ಥಂಕರ ರವರು ಜೈನ ಧರ್ಮದ ಮೂಲ ಸಿದ್ಧಾಂತಗಳನ್ನು, ವಿಶ್ವದೆಲ್ಲೆಲ್ಲ ಶಾಂತಿ, ಭ್ರಾತೃತ್ವದ ಧರ್ಮ ಸಂದೇಶವನ್ನು ಸಾರಿದವರು"** ಎಂದು ಹೊಂಬುಜ ಅತಿಶಯ ಶ್ರೀಕ್ಷೇತ್ರದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿಯವರು ಶ್ರೀ ಆದಿನಾಥ ಸ್ವಾಮಿಯವರು ಮೋಕ್ಷಕಲ್ಯಾಣ ಮಹೋತ್ಸವದ ಧಾರ್ಮಿಕ ವಿಧಿ-ವಿಧಾನಗಳ ಬಳಿಕ ಪ್ರವಚನದಲ್ಲಿ ತಿಳಿಯಬಯಸಿದರು.

**"ಅಸಿ, ಮಸಿ, ಕೃಷಿ, ಆದಿ ವಿದ್ಯೆಗಳನ್ನು ಮನುಕುಲಕ್ಕೆ ಹೇಳಿ ಕೊಟ್ಟ ಆದಿನಾಥರು ಬ್ರಾಹ್ಮಿ ಸುಂದರಿಯರಿಗೆ ವಿದ್ಯೆ ಹೇಳಿಕೊಡುವ ಮೂಲಕ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಒತ್ತು ಕೊಟ್ಟವರು. ಅಂತಿಮವಾಗಿ ಕೈಲಾಸ ಪರ್ವತದಲ್ಲಿ ಆತ್ಮ ಸಾಕ್ಷಾತ್ಕಾರ ಮಾಡಿಕೊಂಡು ಮೋಕ್ಷಕ್ಕೆ"** ಹೋದರು.

**"ಅಹಿಂಸಾ ಧರ್ಮ ಪಥದಲ್ಲಿ ಪ್ರಾಣಿ ಪಕ್ಷಿಗಳ, ಸಸ್ಯ ಜೀವಿಗಳ ಸಂರಕ್ಷಣೆ ಮಾಡಬೇಕು. ಮಾನವ ಸಮಾಜದಲ್ಲಿ ಸಹಬಾಳ್ವೆ, ಸಾಮರಸ್ಯದ ಮನೋಭಾವವು ಸರ್ವತ್ರ ಪಸರಿಸಲು ಶ್ರೀ ಆದಿನಾಥ ತೀರ್ಥಂಕರ ಪ್ರಣೀತ ಜೈನ ಧರ್ಮ ಸಾರದ ಸತ್‌ಪರಿಣಾಮದಿಂದ ಅಕ್ಷಯ ಸುಖ ಪ್ರಾಪ್ತಿಯಾಗುತ್ತದೆ"** ಎಂದು ತಿಳಿಸಿ ಪ್ರಾತಃಸ್ಮರಣೀಯರಾಗಿರುವವರು ಎಂಬ ಶುಭ ಭಾವನೆಯನ್ನು ಸ್ವಸ್ತಿಶ್ರೀಗಳವರು ಹೇಳಿದರು. ಭಕ್ತರನ್ನು ಹರಸಿ, ಆಶೀರ್ವದಿಸಿದರು.

ಹೊಂಬುಜ ಶ್ರೀಕ್ಷೇತ್ರ ನಗರ ಜಿನಾಲಯದಲ್ಲಿ ಭಕ್ತವೃಂದ, ಕುಂದಕುಂದ ವಿದ್ಯಾಪೀಠದ ವಿದ್ಯಾರ್ಥಿಗಳು ಶ್ರೀ ಆದಿನಾಥ ಸ್ವಾಮಿಯ ಪೂಜೆ ನೆರವೇರಿಸಿದರು. ಶ್ರೀ 1008 ಪಾರ್ಶ್ವನಾಥ ಸ್ವಾಮಿ, ಶ್ರೀ ನೇಮಿನಾಥ ಸ್ವಾಮಿ, ಶ್ರೀ ಮಹಾವೀರ ಸ್ವಾಮಿ, ಶ್ರೀ ಸರಸ್ವತಿ ದೇವಿ, ಶ್ರೀ ಕೂಷ್ಮಾಂಡಿನಿ ದೇವಿ ಜಿನಾಲಯಗಳಲ್ಲಿ ವಿಶೇಷ ಪೂಜೆಗಳು ಜರುಗಿದವು. ಜಗನ್ಮಾತೆ ಯಕ್ಷಿ ಶ್ರೀ ಪದ್ಮಾವತಿ ದೇವಿ ಸನ್ನಿಧಿಯಲ್ಲಿ ಸ್ತೋತ್ರಗಳನ್ನು ಪಠಿಸಿ, ಪೂಜೆ ಸಮರ್ಪಿಸಲಾಯಿತು.



**ಶ್ರವಣಬೆಳಗೊಳ :** ಹಿರಿಯ ಶ್ರಾವಕ, ಸಾಹಿತಿ, ಪತ್ರಕರ್ತರಾದ ಶ್ರೀ ಎಸ್.ಎನ್. ಅಶೋಕಕುಮಾರರವರು 08-02-2025ರಂದು ನಿಧನರಾದರು. 'ಗೊಮ್ಮಟವಾಣಿ' ಪಾಕ್ಷಿಕ ಪತ್ರಿಕೆಯ ಸಂಪಾದಕರಾಗಿದ್ದರು.

ಹೊಂಬುಜ ಶ್ರೀಮಠದೊಂದಿಗೆ ನಿಕಟ ಸಂಪರ್ಕ ಹೊಂದಿದ್ದು, ಹಲವಾರು ರೀತಿಯ ಸಲಹೆಗಳನ್ನು ನೀಡಿ ಸದಾ ಅಭಿವೃದ್ಧಿಯ ಪಕ್ಷಿನೋಟಕ್ಕೆ ಧರ್ಮಸ್ಪರ್ಶ ನೀಡುತ್ತಿದ್ದರು. ಇವರ ಅಗಲಿಕೆಯಿಂದ ದುಃಖತಪ್ತರಾದ ಪತ್ನಿ, ಪುತ್ರ, ಕುಟುಂಬಸ್ಥರಿಗೆ ದುಃಖವನ್ನು ಸಹಿಸುವ ಶಕ್ತಿಯನ್ನು ಅತಿಶಯ ಶ್ರೀಕ್ಷೇತ್ರ ಹೊಂಬುಜದ ಭ. ಶ್ರೀ ಪಾರ್ಶ್ವನಾಥ ಸ್ವಾಮಿ, ಜಗನ್ಮಾತೆ ಶ್ರೀಪದ್ಮಾವತಿ ದೇವಿ ಕರುಣಿಸಲೆಂದು ಹೊಂಬುಜ ಶ್ರೀಗಳವರು ತಿಳಿಸಿದ್ದಾರೆ.

**ಜಿನ-ದನಿ**

ದಿಕ್ಖಂ ಗಹಂತಿ ರಾಯೇಣಂ, ಸಹ ಮಿತ್ತಾಣಿ ಜೇ ಜಣಾ ।
ತೇ ಜಗೇ ಸೇಟ್ಠ-ಮಿತ್ತಾಇಂ, ಗಚ್ಛಂತಿ ಯ ಪರೇ ಭವೇ ॥17॥

**ಅರ್ಥ:** ಯಾವ ಮಿತ್ರನು, ಬಂಧುಗಳು ರಾಜನ ಜೊತೆಗೆ ದೀಕ್ಷಿತರಾಗುತ್ತಾರೆ ಅವರೇ ಅವರ(ರಾಜನ) ಈ ಜಗತ್ತಿನಲ್ಲಿ ನಿಜವಾದಂತಹ ಮಿತ್ರರಿದ್ದಾರೆ ಮತ್ತು ಮುಂದಿನ ಭವದಲ್ಲೂ ಕೂಡ ಜೊತೆಗೆ ಹೋಗುತ್ತಾರೆ.

## ಬರಲಿರುವ ಪರ್ವದಿನಗಳು

**ಕ್ರೋಧಿನಾಮ ಸಂವತ್ಸರದ**

**ಮಾಘಮಾಸ ಕೃಷ್ಣಪಕ್ಷ ಪಂಚಮಿಯಿಂದ ಫಾಲ್ಗುಣಮಾಸ ಕೃಷ್ಣಪಕ್ಷ ತದಿಗೆಯವರೆಗೆ**

**ಮಾಘ ಮಾಸ**

ಫೆ. 17 ಸೋಮ-ಪಂಚಮಿ-ಚಿತ್ತಾ
ಫೆ. 18 ಮಂಗಳ-ಷಷ್ಠಿ-ಸ್ವಾತಿ
ಫೆ. 19 ಬುಧ-ಷಷ್ಠಿ-ಸ್ವಾತಿ
ಫೆ. 20 ಗುರು-ಸಪ್ತಮಿ-ವಿಶಾಖ
ಫೆ. 21 ಶುಕ್ರ-ಅಷ್ಟಮಿ-ಅನುರಾಧ
ಫೆ. 22 ಶನಿ-ನವಮಿ-ಜ್ಯೇಷ್ಠ
ಫೆ. 23 ಭಾನು-ದಶಮಿ-ಮೂಲ
ಫೆ. 24 ಸೋಮ-ಏಕಾದಶಿ-ಪೂ.ಷಾ.
ಫೆ. 25 ಮಂಗಳ-ದ್ವಾದಶಿ-ಉ.ಷಾ.
ಫೆ. 26 ಬುಧ-ತ್ರಯೋದಶಿ-ಶ್ರವಣ
ಫೆ. 27 ಗುರು-ಚತುರ್ದಶಿ-ಧನಿಷ್ಠ
ಫೆ. 28 ಶುಕ್ರ-ಅಮವಾಸ್ಯೆ-ಪ್ರತಿಪದ-ಶತಭಿಷಾ

**ಫಾಲ್ಗುಣ ಮಾಸ**

ಮಾ. 1 ಶನಿ-ಬಿದಿಗೆ-ಪೂ.ಭಾದ್ರ
ಮಾ. 2 ಭಾನು-ತದಿಗೆ-ಉ.ಭಾದ್ರ
ಮಾ. 3 ಸೋಮ-ಚತುರ್ಥಿ-ರೇವತಿ-ಅಶ್ವಿನಿ
ಮಾ. 4 ಮಂಗಳ-ಪಂಚಮಿ-ಭರಣಿ
ಮಾ. 5 ಬುಧ-ಷಷ್ಠಿ-ಕೃತ್ತಿಕಾ
ಮಾ. 6 ಗುರು-ಸಪ್ತಮಿ-ರೋಹಿಣಿ
ಮಾ. 7 ಶುಕ್ರ-ಅಷ್ಟಮಿ-ಮೃಗಶಿರಾ
ಮಾ. 8 ಶನಿ-ನವಮಿ-ಆರಿದ್ರಾ
ಮಾ. 9 ಭಾನು-ದಶಮಿ-ಪುನರ್ವಸು
ಮಾ.10 ಸೋಮ-ಏಕಾದಶಿ-ಪುಷ್ಯ
ಮಾ.11 ಮಂಗಳ-ದ್ವಾದಶಿ-ಆಶ್ಲೇಷಾ
ಮಾ.12 ಬುಧ-ತ್ರಯೋದಶಿ-ಮಘಾ
ಮಾ.13 ಗುರು-ಚತುರ್ದಶಿ-ಪೂರ್ವಾ
ಮಾ.14 ಶುಕ್ರ-ಹುಣ್ಣಿಮೆ-ಪೂರ್ವಾ
ಮಾ.15 ಶನಿ-ಪ್ರತಿಪದ-ಉತ್ತರ
ಮಾ.16 ಭಾನು-ಬಿದಿಗೆ-ಹಸ್ತ
ಮಾ.17 ಸೋಮ-ತದಿಗೆ-ಚಿತ್ತ

## 'ಮಹಾವೀರ ಶಾಂತಿ ಪ್ರಶಸ್ತಿ' ಗೆ ಆಯ್ಕೆ



ಕರ್ನಾಟಕ ಸರ್ಕಾರವು 2024-25ನೇ ಸಾಲಿನ ರಾಷ್ಟ್ರೀಯ 'ಮಹಾವೀರ ಶಾಂತಿ ಪ್ರಶಸ್ತಿ'ಗೆ 'ಪಂಡಿತರತ್ನ ಎ. ಶಾಂತಿರಾಜಶಾಸ್ತ್ರಿ ಟ್ರಸ್ಟ್', ಬೆಂಗಳೂರು ಆಯ್ಕೆಯಾಗಿದೆ ಎಂದು ಪ್ರಕಟಿಸಿದೆ. ಇದು ರೂ. 10.00 ಲಕ್ಷಗಳ ಮೊಬಲಗನ್ನು ಒಳಗೊಂಡಿರುತ್ತದೆ. ಟ್ರಸ್ಟಿನ ಚೇರ್ಮನ್‌ರಾದ ಶ್ರೀ ಎಸ್. ಜಿತೇಂದ್ರ ಕುಮಾರ್ ಅವರು ನಮ್ಮ ಟ್ರಸ್ಟ್‌ಗೆ ಸಂದ ಅತ್ಯದ್ಭುತ, ಉನ್ನತ ಗೌರವವಾಗಿದ್ದು ಇದು, ನಮ್ಮ ಜೈನ ಸಮಾಜಕ್ಕೆ ಸಂದ ಗೌರವವಾಗಿದೆ ಎಂದು ಸಂತಸ ವ್ಯಕ್ತಪಡಿಸಿರುತ್ತಾರೆ.

## ನಿತಿನ್ ಹೆಚ್.ಪಿ. ರವರಿಗೆ 'ಸಂಸ್ಕೃತಿ ಸಂರಕ್ಷಕ' ಗೌರವ



**ಕೋಲ್ಕತಾ:** ಐಟಿ ತಂತ್ರಜ್ಞ, ಜೈನ ಸಂಶೋಧಕ ಹಾಗೂ ಜೈನ್ ಹೆರಿಟೇಜ್ ಸೆಂಟರ್ಸ್.ಕಾಂ ನ ಸಂಸ್ಥಾಪಕರು ಹಾಗೂ ಕಾರ್ಯನಿರ್ವಾಹಕ ನಿರ್ದೇಶಕರಾದ ನಿತಿನ್ ಹೆಚ್.ಪಿ. ರವರ ಜೈನಧರ್ಮದ ಸಂರಕ್ಷಣೆ ಮತ್ತು ಸಂವರ್ಧನೆಯ ಕಾರ್ಯವನ್ನು ಗುರುತಿಸಿ, ಶ್ರೀ ಭಾರತವರ್ಷೀಯ ದಿಗಂಬರ ಜೈನ ತೀರ್ಥಸಂರಕ್ಷಿಣಿ ಮಹಾಸಭಾದ ಪಶ್ಚಿಮ ಬಂಗಾಳ ವಿಭಾಗವು 'ಸಂಸ್ಕೃತಿ ಸಂರಕ್ಷಕ' ಎಂಬ ಬಿರುದನ್ನು ನೀಡಿ ಗೌರವಿಸಿದೆ. ಕೋಲ್ಕತ್ತಾದ ಬಡಾ ಬಜಾರ್ ನ ಜೈನಭವನದಲ್ಲಿ 30 ಡಿಸೆಂಬರ್ 2024ರಂದು ನಡೆದ ವಿಶೇಷ ಸಮಾರಂಭದಲ್ಲಿ ಇವರನ್ನು ಸತ್ಕರಿಸಿ ಸನ್ಮಾನಿಸಲಾಯಿತು.

ಇವರು ಕರ್ನಾಟಕವಲ್ಲದೇ ಭಾರತದ ಇತರ ರಾಜ್ಯಗಳ ಅದರಲ್ಲೂ ವಿಶೇಷವಾಗಿ ಪಶ್ಚಿಮ ಬಂಗಾಳ ರಾಜ್ಯದ ಜೈನ ಪರಂಪರೆ ಕೇಂದ್ರಗಳಿಗೆ ಕ್ಷೇತ್ರಕಾರ್ಯವನ್ನು ಕೈಗೊಂಡು ಪಶ್ಚಿಮ ಬಂಗಾಳದಲ್ಲಿ ಜೈನಧರ್ಮದ ಕುರಿತು ಕಳೆದ ಎರಡು ವರ್ಷಗಳಿಂದ ವಿಶೇಷ ಸಂಶೋಧನೆಯನ್ನು ಕೈಗೊಂಡಿದ್ದಾರೆ. ಕಾರ್ಯಕ್ರಮದಲ್ಲಿ ದಿಗಂಬರ ಜೈನ ಮಹಾಸಭಾದ ರಾಷ್ಟ್ರೀಯ ಕಾರ್ಯದರ್ಶಿಗಳಾದ ಶ್ರೀ ರಾಜ್ ಕುಮಾರ್ ಸೇಠಿ, ಮಹಾಸಭಾದ ಪಶ್ಚಿಮ ಬಂಗಾಳ ವಿಭಾಗದ ಪದಾಧಿಕಾರಿಗಳು ಹಾಗೂ ಇನ್ನಿತರ ಪ್ರಮುಖರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



**ಬೆಂಗಳೂರು :** ಇಲ್ಲಿಯ ಬಸವನಗುಡಿ ಹತ್ತಿರದ ರತ್ನತ್ರಯ ನಿವಾಸಿ ಡಾ॥ ಹೊ. ಶ್ರೀ ಮದನಕೇಸರಿ (91 ವರ್ಷ) ಇವರು ಜ. 19ರಂದು ನಿಧನ ಹೊಂದಿದರು. ಇವರು ಪತ್ನಿ ಎಂ.ಪಿ. ಗುಣಮಾಲ, ಮಕ್ಕಳು ಹಾಗೂ ಅಪಾರ ಬಂಧು-ವರ್ಗದವರನ್ನು ಅಗಲಿದ್ದಾರೆ.

ಇವರು ಹೊಂಬುಜ ಶ್ರೀಮಠದೊಂದಿಗೆ ನಿಕಟ ಸಂಪರ್ಕ ಹೊಂದಿದ್ದು, ಹೊಂಬುಜ ಜೈನ ಮಠದಿಂದ ಸನ್ಮಾನಿಸಲಾಗಿತ್ತು. ಇವರ ಅಗಲಿಕೆಯಿಂದ ದುಃಖತಪ್ತರಾದ ಪತ್ನಿ, ಮಕ್ಕಳು, ಕುಟುಂಬಸ್ಥರಿಗೆ ದುಃಖವನ್ನು ಸಹಿಸುವ ಶಕ್ತಿಯನ್ನು ಅತಿಶಯ ಶ್ರೀಕ್ಷೇತ್ರ ಹೊಂಬುಜದ ಭ. ಶ್ರೀ ಪಾರ್ಶ್ವನಾಥ ಸ್ವಾಮಿ, ಜಗನ್ಮಾತೆ ಶ್ರೀಪದ್ಮಾವತಿ ದೇವಿ ಕರುಣಿಸಲೆಂದು ಹೊಂಬುಜ ಶ್ರೀಗಳವರು ತಿಳಿಸಿದ್ದಾರೆ.

## ವರೂರು ನವಗ್ರಹ ಕ್ಷೇತ್ರ : ಧರ್ಮ ಪ್ರಭಾವನೆಯೊಂದಿಗೆ ಯಶಸ್ಸು ಕಂಡ ಭವ್ಯಾತಿಭವ್ಯ ಪಂಚಕಲ್ಯಾಣ, ಸುಮೇರು ಪರ್ವತದ ಲೋಕಾರ್ಪಣೆ ಹಾಗೂ ಮಹಾಮಸ್ತಕಾಭಿಷೇಕ



ವರೂರಿನ ನವಗ್ರಹತೀರ್ಥ ಕ್ಷೇತ್ರದಲ್ಲಿ ವಿಶ್ವ ಶಾಂತಿಗಾಗಿ ಸಕಲ ಜೀವರಾಶಿಗಳ ಕಲ್ಯಾಣಕ್ಕಾಗಿ 2025 ಜ. 15 ರಿಂದ 26ರವರೆಗೆ ಅತ್ಯಂತ ವೈಭವದಿಂದ ನವ ತೀರ್ಥಂಕರರ ದ್ವಿತೀಯ ಮಹಾಮಸ್ತಕಾಭಿಷೇಕ, ಸುಮೇರು ಪರ್ವತದ ಲೋಕಾರ್ಪಣೆ ಹಾಗೂ ಜಿನಬಿಂಬಗಳ ಪಂಚಕಲ್ಯಾಣ ಪ್ರತಿಷ್ಠಾ ಮಹಾಮಹೋತ್ಸವವು ಪರಮಪೂಜ್ಯ ರಾಷ್ಟ್ರಸಂತ ಆಚಾರ್ಯ ಶ್ರೀ ಗುಣಧರನಂದಿ ಮುನಿಮಹಾರಾಜರು, ಪರಮಪೂಜ್ಯ ಗಣಾಧಿಪತಿ ಗಣಧರಾಚಾರ್ಯ ಶ್ರೀ ಕುಂಥುಸಾಗರ ಮಹಾರಾಜಾರಾದಿಯಾಗಿ ಅನೇಕ ಆಚಾರ್ಯರು, ಮುನಿಗಳು ಮಾತಾಜಿಯರ ಸಾನಿಧ್ಯದಲ್ಲಿ ಮತ್ತು ಕ್ಷೇತ್ರದ ಪೀಠಾಧಿಪತಿ ಪರಮಪೂಜ್ಯ ಸ್ವಸ್ತಿಶ್ರೀ ಧರ್ಮಸೇನ ಭಟ್ಟಾರಕ ಮಹಾಸ್ವಾಮೀಜಿಯವರ ನೇತೃತ್ವ, ಸಕಲ ಜೈನ ಮಠಗಳ ಭಟ್ಟಾರಕ ಮಹಾಸ್ವಾಮಿಗಳ ಹಾಗೂ ಮಹೋತ್ಸವದ ಅಧ್ಯಕ್ಷರಾದ ರಾಜರ್ಷಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರ ಉಪಸ್ಥಿತಿಯಲ್ಲಿ ಅತ್ಯಂತ ಯಶಸ್ವಿಯಾಗಿ ಜರುಗಿತು. ಈ ಮೂಲಕ ಜೈನ ಧರ್ಮದ ಪ್ರಭಾವ ಪ್ರಪಂಚದಾದ್ಯಂತ ಪಸರಿಸಿತು.

ದಿನಾಂಕ 15-01-2025 ರಂದು ಕರ್ನಾಟಕ ರಾಜ್ಯದ ಗೌರವಾನ್ವಿತ ರಾಜ್ಯಪಾಲರಾದ ಶ್ರೀ ಥಾವರಚಂದ ಗೆಹ್ಲೋಟ್‌ರವರಿಂದ ಉದ್ಘಾಟನೆಗೊಂಡು ಮುಂದೆ ಜನವರಿ 20 ರವರೆಗೆ ಜಿನಬಿಂಬಗಳ ಪಂಚಕಲ್ಯಾಣ ಪೂಜಾ ವಿಧಿ-ವಿಧಾನಗಳು ಅತ್ಯಂತ ವಿಧಿವತ್ತಾಗಿ ಜರುಗಿದವು. ಅಲ್ಲದೆ ಈ ಸಂದರ್ಭದಲ್ಲಿ ಮುನಿ ದೀಕ್ಷೆ, ಕ್ಷುಲ್ಲಕ ಆರ್ಯಿಕಾ ದೀಕ್ಷೆ ಮತ್ತು ಇಬ್ಬರು ಮುನಿ ಮಹಾರಾಜರಿಗೆ ಆಚಾರ್ಯ ಪದವಿ ಪ್ರದಾನ ಮಾಡಲಾಯಿತು. ಸಹಸ್ರಾರು ಮಕ್ಕಳಿಗೆ ಮೌಂಜಿ ಬಂಧನ, ಯುವಕ ಯುವತಿಯರಿಗೆ ವ್ರತ ಧಾರಣ ಮುಂತಾದ ಕಾರ್ಯಕ್ರಮಗಳು ನಡೆದವು.

ದಿನಾಂಕ 21 ರಂದು ಪ್ರಪಂಚದ ಏಕಮೇವ 405 ಅಡಿ ಎತ್ತರದ ಸುಮೇರುಪರ್ವತ ಜಂಬೂದ್ವೀಪ ಆರಾಧನೆಯೊಂದಿಗೆ ಲೋಕಾರ್ಪಣೆಗೊಂಡಿತು. ದಿನಾಂಕ 22 ಹಾಗೂ 23 ರಂದು ನವಗ್ರಹ ತೀರ್ಥಂಕರರಿಗೆ ಪವಿತ್ರ ಜಲಾಭಿಷೇಕದೊಂದಿಗೆ ಮಸ್ತಕಾಭಿಷೇಕ ಪ್ರಾರಂಭವಾಗಿ 24, 25 ಮತ್ತು 26 ಈ ಮೂರು ದಿನಗಳಲ್ಲಿ ಅಷ್ಟದ್ರವ್ಯಗಳಿಂದ ಬೃಹತ್ ಮಹಾಮಸ್ತಕಾಭಿಷೇಕ ಅತ್ಯಂತ ಭವ್ಯವಾಗಿ ಜರುಗಿತು. ಕೊನೆಯ ದಿನ ವಿಶ್ವ ಶಾಂತಿಗಾಗಿ ಖ್ಯಾತ ಪಂಡಿತರಿಂದ 9999 ಹೋಮಕುಂಡಗಳಲ್ಲಿ ಹವನ ಯಜ್ಞ ನಡೆಯಿತು ಮತ್ತು 26 ರಂದು 405 ಅಡಿ ಸುಮೇರು ಪರ್ವತದ ಮೇಲೆ ಗಣರಾಜ್ಯೋತ್ಸವದ ಅಂಗವಾಗಿ ತ್ರಿವರ್ಣ ಧ್ವಜ ಹಾರಾಡಿತು ಮತ್ತು ಜೈನ ಧರ್ಮದ ಪಂಚರಂಗಿ ಧ್ವಜವನ್ನೂ ಆರೋಹಣ ಮಾಡಲಾಯಿತು.

ಈ ಮಧ್ಯ 12 ದಿನವೂ ದೇಶದ ಉಪರಾಷ್ಟ್ರಪತಿಯವರೂ ಸೇರಿ ವಿವಿಧ ರಾಜ್ಯಗಳ ರಾಜ್ಯಪಾಲರು, ರಾಜ್ಯದ ಸಚಿವರು, ರಾಜಕೀಯ ನಾಯಕರು, ಗಣ್ಯಾತಿಗಣ್ಯರು, ಸರ್ವಧರ್ಮದ ಸ್ವಾಮೀಜಿಯವರು, ಸಾಹಿತಿಗಳು, ಬರಹಗಾರರು, ಕಲಾವಿದರು, ಸಂಗೀತಗಾರರು ಮುಂತಾದವರು ಭಾಗವಹಿಸಿ ಕಾರ್ಯಕ್ರಮದ ಮೆರಗು ಹೆಚ್ಚಿಸಿದರು. ಇಂಥ ಅಪರೂಪದ ಕಾರ್ಯಕ್ರಮದಲ್ಲಿ ಪ್ರತಿ ದಿನ ಮುಂಜಾನೆಯಿಂದ ರಾತ್ರಿಯವರೆಗೂ ಒಂದು ಲಕ್ಷಕ್ಕೂ ಮೀರಿ ಜನರು ಭಾಗವಹಿಸಿದ್ದರು. ಈ ಕಾರ್ಯಕ್ರಮ ದೇಶ ಮಾತ್ರವಲ್ಲ ಪ್ರಪಂಚವೇ ಬೆರಗಾಗುವಂತೆ ದಾಖಲೆ ನಿರ್ಮಿಸಿತು. ಈ ಮೂಲಕ ಜೈನ ಧರ್ಮದ ಪ್ರಭಾವ ಪ್ರಪಂಚದಾದ್ಯಂತ ಪಸರಿಸಿತು. 12 ದಿನವೂ ವೈವಿಧ್ಯಮಯ ಕಾರ್ಯಕ್ರಮಗಳೊಂದಿಗೆ ಮಹೋತ್ಸವ ಸಂಪನ್ನಗೊಂಡಿತು.



ವರೂರು ಪಂಚಕಲ್ಯಾಣ ಮಹೋತ್ಸವದ ಸಂದರ್ಭದಲ್ಲಿ ಬೆಂಗಳೂರಿನ ಅಲ್ಪಸಂಖ್ಯಾತ ಇಲಾಖೆಯ ಕಾರ್ಯದರ್ಶಿಯಾದ ಶ್ರೀ ಮನೋಜ್ ಜೈನ್‌ರವರಿಗೆ 'ಜೈನ್ ಭಾರತ ಗೌರವ' ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

## ಪ್ರತಿಷ್ಠಾಪನಾ ಪಾದಪೂಜೆ ಕಾರ್ಯಕ್ರಮ



**ಕನಕಗಿರಿ :** ಶ್ರೀಕ್ಷೇತ್ರ ಜೈನ ಮಠದ ಬೆಟ್ಟದ ಮೇಲಿನ ಭಗವಾನ್ ಶ್ರೀ ಬಾಹುಬಲಿ ಸ್ವಾಮಿ ಪ್ರತಿಷ್ಠಾಪನ ಪಾದಪೂಜೆ ಕಾರ್ಯಕ್ರಮವು ಶ್ರೀ ಮಠದ ಪರಮಪೂಜ್ಯ ಸ್ವಸ್ತಿಶ್ರೀ ಭುವನಕೀರ್ತಿ ಭಟ್ಟಾರಕ ಮಹಾಸ್ವಾಮಿಗಳವರು ಹಾಗೂ ಹೊಂಬುಜ ಜೈನ ಮಠದ ಪರಮಪೂಜ್ಯ ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮಿಗಳವರ ದಿವ್ಯ ಉಪಸ್ಥಿತಿಯಲ್ಲಿ ವಿಶೇಷ ಪಂಚಾಮೃತ ಮಹಾಭಿಷೇಕ ಪೂಜೆ ನಡೆಯಿತು.

### 38ನೇ ವಾರ್ಷಿಕೋತ್ಸವ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ

## ನೇರಂಕಿ ಪಾರ್ಶ್ವನಾಥರವರಿಗೆ 'ಮಹಾಕವಿ ರತ್ನಾಕರವರ್ಣಿ' ಪ್ರಶಸ್ತಿ ಪ್ರದಾನ



**ಬೆಂಗಳೂರು :** ಇಲ್ಲಿಯ ದಕ್ಷಿಣ ಕನ್ನಡ ಜೈನ ಮೈತ್ರಿಕೂಟದ 38ನೇ ವಾರ್ಷಿಕೋತ್ಸವದಲ್ಲಿ ಸಾಮಾಜಿಕ ಜಾಲತಾಣದಲ್ಲಿ ಧಾರ್ಮಿಕ ಪ್ರಭಾವನಾ ಚತುರ ನೇರಂಕಿ ಪಾರ್ಶ್ವನಾಥ ಅವರಿಗೆ ಹಿರಿಯ ಸಾಹಿತಿ ಪ್ರೊ। ಹಂಪ ನಾಗರಾಜಯ್ಯ ಅವರು 'ಮಹಾಕವಿ ರತ್ನಾಕರವರ್ಣಿ' ಪ್ರಶಸ್ತಿ ಪ್ರದಾನ ಮಾಡಿದರು.

ಬಸವನಗುಡಿಯಲ್ಲಿರುವ ಶ್ರೀ ಧರ್ಮಸ್ಥಳ ಮಂಜುನಾಥಸ್ವಾಮಿ ಕಲ್ಯಾಣ ಮಂಟಪದಲ್ಲಿ ಜ. 26ರ ಭಾನುವಾರದಂದು ಕಾರ್ಯಕ್ರಮ ನಡೆಯಿತು.

ಪ್ರಶಸ್ತಿ ಸ್ವೀಕರಿಸಿದ ಶ್ರೀ ಪಾರ್ಶ್ವನಾಥರವರು ಮಾತನಾಡಿ, 'ಬಸದಿಗಳ ದಾಖಲೀಕರಣದಲ್ಲಿ ಹಲವು ಸವಾಲುಗಳು ಎದುರಾಗಿದ್ದವು. ಝಾರ್ಖಂಡ್‌ನ ಸಮ್ಮೇದ ಶಿಖರ್ಜಿಯಲ್ಲಿರುವ ಪ್ರದೇಶಗಳನ್ನು 360' ಡಿಗ್ರಿ ಆಯಾಮಗಳಲ್ಲಿ ಸೆರೆಹಿಡಿದಿದ್ದೇನೆ. ಅಂತಹ ಜಾಗವನ್ನು ಉಳಿಸಿಕೊಳ್ಳುವುದು ಬಹಳ ಮುಖ್ಯ. ಇದೆಲ್ಲವೂ ನಮ್ಮ ಕೈಯಲ್ಲಿದೆ. ಗೂಗಲ್‌ನಲ್ಲಿ 13 ವರ್ಷಗಳಿಂದ ಹಲವು ಬಸದಿಗಳ ಫೋಟೋ ಹಾಕುತ್ತಿದ್ದೇನೆ' ಎಂದರು.

ಧರ್ಮಸ್ಥಳ ಶ್ರೀ ಸುರೇಂದ್ರ ಕುಮಾರ್‌ರವರು ಮಾತನಾಡಿ, 'ಮಹಾಕವಿ ರತ್ನಾಕರ ಹಾಗೂ ಮಹಾತ್ಮಾ ಗಾಂಧೀಜಿ ನನ್ನ ಜೀವನದಲ್ಲಿ ಪ್ರಭಾವ ಬೀರಿದರು. ಹಾಗಾಗಿ ರತ್ನಾಕರವರ್ಣಿ ಹೆಸರಿನಲ್ಲಿ ಪ್ರಶಸ್ತಿ ಕೊಡೋಣ ಎಂದು ಹಿಂದೆ ಸಣ್ಣ ರೀತಿಯಲ್ಲಿ ಪ್ರಾರಂಭಿಸಿದೆವು. ಧೈರ್ಯವಾಗಿ ಮುಂದೆ ಹೋಗಿದ್ದರಿಂದ ಇಷ್ಟು ವರ್ಷ ಕಾರ್ಯಕ್ರಮ ನಡೆಸಿಕೊಂಡು ಬರಲು ಸಾಧ್ಯವಾಗಿದೆ' ಎಂದರು

ಶ್ರೀಮತಿ ಅನಿತಾ ಸುರೇಂದ್ರಕುಮಾರ್, ಮೈತ್ರಿಕೂಟದ ಸ್ಥಾಪಕ ಕಾರ್ಯಾಧ್ಯಕ್ಷ ಕೆ.ಬಿ. ಯುವರಾಜ್ ಬಲ್ಲಾಳ್, ಕಾರ್ಯದರ್ಶಿ ಶಶಿರೇಖಾ ಅಮಿತಾನಂದ ಶೆಟ್ಟಿ ಉಪಸ್ಥಿತರಿದ್ದರು.

WWW.HOMBUJAPADMAVATI.ORG

### ಧಾಮ ಸಂಪ್ರೋಕ್ಷಣಾ ಪೂರ್ವಕ ಜಿನಬಿಂಬ ಪ್ರತಿಷ್ಠಾ ಮಹೋತ್ಸವ

## 'ಪ್ರಾಚೀನ ಜಿನಮಂದಿರಗಳ ನವೀಕರಣದಿಂದ ಜೈನ ಸಮಾಜ ಸಂವರ್ಧನೆ'

-ಪರಮಪೂಜ್ಯ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



**ಅಬ್ಬಣಬೆಟ್ಟು (ಕಾರ್ಕಳ) : 'ಪ್ರಾಚೀನ ಜಿನಮಂದಿರಗಳು ಅಂದಿನ ಮುನಿವರ್ಯ, ಭಟ್ಟಾರಕರ ಮಾರ್ಗದರ್ಶನದಲ್ಲಿ ನಿರ್ಮಿಸಲ್ಪಟ್ಟಿವೆ. ಜೈನ ಸಮಾಜವು ಪ್ರಸ್ತುತ ಶಿಥಿಲಾವಸ್ಥೆಯಿಂದ ಇರುವ ಜಿನಮಂದಿರಗಳ ಜೀರ್ಣೋದ್ಧಾರ, ನವೀಕರಣ ಕಾರ್ಯ ಮಾಡುವುದು ಸ್ತುತ್ಯರ್ಹ'** ಎಂದು ಅತಿಶಯ ಶ್ರೀಕ್ಷೇತ್ರ ಹೊಂಬುಜ ಜೈನ ಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರು ತಿಳಿಸಿದರು.

ಕಾರ್ಕಳ ತಾಲ್ಲೂಕಿನ ಮುಡಾರು ಗ್ರಾಮದ ಅಬ್ಬಣಿಬೆಟ್ಟು ಶ್ರೀ 1008 ಪಾರ್ಶ್ವನಾಥ ಸ್ವಾಮಿ, ಶ್ರೀ ಪದ್ಮಾವತಿ ದೇವಿ, ಶ್ರೀ ಕ್ಷೇತ್ರಪಾಲ, ಶ್ರೀ ನಾಗದೇವರ ಸನ್ನಿಧಿಯಲ್ಲಿ ಧಾಮ ಸಂಪ್ರೋಕ್ಷಣಾ ಪೂರ್ವಕ ಜಿನಬಿಂಬ ಪ್ರತಿಷ್ಠಾ ಮಹೋತ್ಸವದ ಪ್ರಥಮ ದಿನದಂದು (ಜ.17) ಪ್ರವಚನದಲ್ಲಿ ನವೀಕರಣ ಮಾಡಿದ ಜಿನಮಂದಿರವು ಶ್ರಾವಕ-ಶ್ರಾವಿಕೆಯರಲ್ಲಿ ಜಿನಭಕ್ತಿ ಸ್ಫುರಿಸಲಿ ಹಾಗೂ ನಿರಂತರ ಧಾರ್ಮಿಕ ವಿಧಿ-ವಿಧಾನಗಳು ನಿರ್ವಿಘ್ನವಾಗಿ ನೆರವೇರಲಿ ಎನ್ನುತ್ತಾ ಬಸದಿಯ ನವನಿರ್ಮಾಣಕ್ಕೆ ಸಹಕರಿಸಿದ ಸರ್ವರಿಗೂ ಹರಸಿ, ಆಶೀರ್ವದಿಸಿದರು.

ಕಾರ್ಕಳ ಶ್ರೀ ಜೈನ ಮಠದ ಧ್ಯಾನಯೋಗಿ ಪರಮಪೂಜ್ಯ ಸ್ವಸ್ತಿಶ್ರೀ ಲಲಿತಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರು ಧಾರ್ಮಿಕ ವಿಧಿ-ವಿಧಾನದ ನೇತೃತ್ವ, ಮಾರ್ಗದರ್ಶನ, ಸಾನಿಧ್ಯ ನೀಡಿ ಜಿನಮಂದಿರವು ಕಲಾತ್ಮಕವಾಗಿ ನಿರ್ಮಾಣ ಹೊಂದಿದ್ದು, ಭಕ್ತರ ಇಷ್ಟಾರ್ಥ ನೆರವೇರಿಸಲೆಂದರು.

ಇಂದ್ರಪ್ರತಿಷ್ಠೆ, ತೋರಣ ಮುಹೂರ್ತ, ವಿಮಾನಶುದ್ಧಿ, ನಾಂದಿಮಂಗಲ ವಿಧಿಗಳು ನೆರವೇರಿದವು. ಶ್ರೀಮತಿ ಚಂದ್ರಾವತಿ, ಶ್ರೀಮತಿ ನಯನ, ಪ್ರಶಾಂತ್ ಕುಮಾರ್ ಶ್ರೀಗಳವರಿಂದ ಶ್ರೀಫಲ ಮಂತ್ರಾಕ್ಷತೆ ಸ್ವೀಕರಿಸಿದರು. ಎರ್ಮಾಳು ಅಶೋಕಕುಮಾರ, ಪಡುಬಿದ್ರಿ ರತ್ನಾಕರರಾಜ್, ಮಹಾವೀರ ಹೆಗ್ಡೆ, ಜ್ಞಾನಚಂದ್ರ ಇಂದ್ರ ಶಾಂತಲಾ ಮುಂತಾದವರು ಉಪಸ್ಥಿತರಿದ್ದರು.

॥ ಭಗವಾನ್ ಶ್ರೀ ಪಾರ್ಶ್ವನಾಥಾಯ ನಮಃ ॥

॥ ಜಗನ್ಮಾತೆ ಶ್ರೀ ಪದ್ಮಾವತಿ ದೇವಿ ನಮಃ ॥



# ಅತಿಶಯ ಶ್ರೀಕ್ಷೇತ್ರ ಹೊಂಬುಜ



# ಶ್ರೀಮುಖ ಪತ್ರಿಕೆ





ಸ್ವಸ್ತಿಶ್ರೀ ಶ್ರೀಮದ್ರಾಯರಾಜಗುರು ಭೂಮಂಡಲಾಚಾರ್ಯವರ್ಯ,
ಮಹಾವಾದವಾದೀಶ್ವರರಾಯ ವಾದಿಪಿತಾಮಹ,
ಸಕಲವಿದ್ವಜ್ಜನ ಸಾರ್ವಭೌಮಾದ್ಯನೇಕಾನ್ವರ್ಥ ಬಿರುದಾವಳಿ ವಿರಾಜಮಾನರುಂ,
ಶ್ರೀ ಮತ್ಕುಂದಕುಂದಾನ್ವಯ, ಸರಸ್ವತೀಗಚ್ಛ,
ಶ್ರೀ ಪದ್ಮಾವತೀದೇವೀ ಲಬ್ಧವರ ಪ್ರಸನ್ನರುಂ,
ಉತ್ತರ ಮಧುರಾಧೀಶ್ವರ ಜಿನದತ್ತರಾಯ ಜೀವರಕ್ಷಾ ಪಾಲಕರುಂ,
ಕಲಿಕುಂಡ ಯಂತ್ರಾರಾಧಕರುಂ, ಸುವರ್ಣಕಲಶ ಪ್ರತಿಷ್ಠಾಪನಾಚಾರ್ಯರುಂ,
ಶ್ರೀ ಜಿನಮತಕಮಲವನ ಹಂಸಾಯಮಾನರುಂ, ಶ್ರೀ ಮನ್ನಿಜಘಟಿಕ ಸ್ಥಾನ ದಿಳ್ಳಿ,
ಮಲಯಾದ್ರಿ, ವಿಜಯನಗರ, ವರಂಗ, ಪಟ್ಟಪೊಂಬುಚ್ಚ ಚತುಃಸ್ಸಿದ್ಧ ಸಿಂಹಾಸನಾಧೀಶ್ವರರುಂ,
ಶ್ರೀಮತ್ ಸಿದ್ಧಾಂತಕೀರ್ತಿ ಭಟ್ಟಾರಕಸ್ವಾಮಿ ಪಟ್ಟಾಂಭೋಜ ದಿವಾಕರರಾಯಮಾನರುಂ,
ಶ್ರೀ ವಿದ್ಯಾನಂದಸ್ವಾಮಿ ಪಟ್ಟಾಂಭೋಜ ದಿವಾಕರರುಂ,

## ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳವರು

### ಕಳುಹಿಸಿರುವ ನಿರೂಪ

ಅತಿಶಯ ಶ್ರೀಕ್ಷೇತ್ರ ಹೊಂಬುಜದಲ್ಲಿ ಪರಂಪರಾನುಗತವಾಗಿ ನೆರವೇರಿಸಿಕೊಂಡು ಬಂದಿರುವ

## ಭಗವಾನ್ ಶ್ರೀ ಪಾರ್ಶ್ವನಾಥ ತೀರ್ಥಂಕರರ ಮತ್ತು ಮಹಾಮಾತೆ ಯಕ್ಷಿ ಶ್ರೀ ಪದ್ಮಾವತಿ ದೇವಿ ಅಮ್ಮನವರ ವಾರ್ಷಿಕ ರಥಯಾತ್ರಾ ಮಹೋತ್ಸವ

ಶ್ರೀ ಕ್ರೋಧಿ ನಾಮ ಸಂವತ್ಸರದ ಫಾಲ್ಗುಣ ಮಾಸ ಕೃಷ್ಣಪಕ್ಷ ಪಂಚಮಿ ದಿನಾಂಕ 19-03-2025 ರಿಂದ ದಶಮಿ 24-03-2025ರ ವರೆಗೆ ನೆರವೇರಲಿರುವುದು.

(ದಿನಾಂಕ 15-03-2025 ರಿಂದ 18-03-2025ರವರೆಗೆ ಕ್ಷೇತ್ರದ ವಿವಿಧ ಬಸದಿಗಳಲ್ಲಿ ವಿಶೇಷ ಆರಾಧನೆಗಳು ನಡೆಯಲಿವೆ)

| 15-03-2025 ಶನಿವಾರ | 16-03-2025 ಭಾನುವಾರ | 17-03-2025 ಸೋಮವಾರ | 18-03-2025 ಮಂಗಳವಾರ |
|---|---|---|---|
| ಶ್ರೀಮಠದ ಬಸದಿಯಲ್ಲಿ (ಶ್ರೀ ನೇಮಿನಾಥ ಸ್ವಾಮಿ ಬಸದಿ) ಗಣಧರವಲಯ ಆರಾಧನೆ | ಶ್ರೀ ಮಕ್ಕಳ ಬಸದಿಯಲ್ಲಿ (ಶ್ರೀಪಾರ್ಶ್ವನಾಥ ಸ್ವಾಮಿ ಚಿಕ್ಕ ಬಸದಿ) ಕಲ್ಯಾಣ ಮಂದಿರ ಆರಾಧನೆ | ನಗರ ಜಿನಾಲಯದಲ್ಲಿ ಭಕ್ತಾಮರ ಆರಾಧನೆ | ಶ್ರೀ ಬೋಗಾರ ಬಸದಿಯಲ್ಲಿ ಚೌಷಟ್ ಋದ್ಧಿ ವಿಧಾನ |

**19-03-2025 ಬುಧವಾರ**

### ನಾಗವಾಹನೋತ್ಸವ

ರಾತ್ರಿ 8-00ಕ್ಕೆ

ಇಂದ್ರಪ್ರತಿಷ್ಠೆ, ವಿಮಾನಶುದ್ಧಿ, ಯಕ್ಷಪ್ರತಿಷ್ಠೆ, ಧ್ವಜಾರೋಹಣ, ಮಹಾನೈವೇದ್ಯ ಪೂಜೆ, ನಾಂದಿಮಂಗಲ, ವಾಸ್ತುಶಾಂತಿ, ಮೃತ್ತಿಕಾ ಸಂಗ್ರಹ

ಪೂಜಾ ಮತ್ತು ಭೋಜನ ಸೇವಾಕರ್ತರುಗಳು:
ಶ್ರೀಮತಿ ರಚನಾ ಜೈನ್ ಮತ್ತು ಶ್ರೀ ಸಂಜೀವ ಜೈನ್
ಅಶೋಕ ಕಂಪನಿ, ದೆಹಲಿ.

**20-03-2025 ಗುರುವಾರ**

### ಸಿಂಹವಾಹನೋತ್ಸವ

ರಾತ್ರಿ 8-00ಕ್ಕೆ

ನಿತ್ಯವಿಧಿ ಸಹಿತ ಶ್ರೀಸ್ವಾಮಿ ಮತ್ತು ಶ್ರೀಅಮ್ಮನವರ ಸನ್ನಿಧಿಯಲ್ಲಿ ಅಭಿಷೇಕ, ಕಲಿಕುಂಡಯಂತ್ರಾರಾಧನೆ

ಪೂಜಾ ಮತ್ತು ಭೋಜನ ಸೇವಾಕರ್ತರುಗಳು:
ಮಾತೃಶ್ರೀ ಶ್ರೀಮತಿ ಮೀನಾದೇವಿ ರಾರಾ ಮತ್ತು
ಪುತ್ರ : ಶ್ರೀ ಪವನಕುಮಾರ್ ರಾರಾ ಮತ್ತು ಸಹೋದರರು,
ತಿನ್ಸುಕಿಯಾ (ಅಸ್ಸಾಂ)

WWW.HOMBUJAPADMAVATI.ORG

**21-03-2025 ಶುಕ್ರವಾರ**

### ಬೆಳ್ಳಿ ರಥೋತ್ಸವ

ರಾತ್ರಿ 8-00ಕ್ಕೆ

### ಪುಷ್ಪ ರಥೋತ್ಸವ

ನಿತ್ಯವಿಧಿ ಸಹಿತ ಜಲಾಗ್ನಿ ಹೋಮ, ಶಾಂತಿಚಕ್ರಾರಾಧನೆ, ಶ್ರೀಬಲಿ.
ಸಂಜೆ 6ಕ್ಕೆ ಧಾರ್ಮಿಕ ಸಭೆ.
**"ಸಿದ್ಧಾಂತಕೀರ್ತಿ" ಪ್ರಶಸ್ತಿ ಪ್ರದಾನ**
ಸಂಜೆ 6-00ಕ್ಕೆ

ಪೂಜಾ ಮತ್ತು ಭೋಜನ ಸೇವಾಕರ್ತರುಗಳು:
ಶ್ರೀ ಸರೋಜ್, ಶ್ರೀಮತಿ ಸರಿತಾ ನವೀನ್ ಬಗಡಾ, ಸೇಲಂ ಮತ್ತು
ಶ್ರೀ ರಾಜೇಂದ್ರ - ಶ್ರೀಮತಿ ಸುಮನ್ ಛಾಬ್ರಾ, ಪ್ರತೀಕ್,
ನಕುಲ್ ಜೈನ್ ಛಾಬ್ರಾ, ಗೌಹಾಟಿ (ಅಸ್ಸಾಂ)

**22-03-2025 ಶನಿವಾರ**

### ಮಹಾರಥೋತ್ಸವ

ಮಧ್ಯಾಹ್ನ 12-55 ಗಂಟೆಗೆ

ಮೂಲಾನಕ್ಷತ್ರದಲ್ಲಿ ನಿತ್ಯ ವಿಧಿ ಸಹಿತ ಮಹಾನೈವೇದ್ಯ ಪೂಜೆ,
ಮಧ್ಯಾಹ್ನ ರಥಾರೋಹಣಕ್ಕೆ
ಪ್ರಸಾದ ಬೇಡಿಕೆ - ರಥಾರೋಹಣ

ಭೋಜನ ಸೇವಾಕರ್ತರುಗಳು:
ಶ್ರೀ ವಿಜಯ ಪಾಟ್ನಿ, ಶ್ರೀಮತಿ ಸರಿತಾ ಪಾಟ್ನಿ
ಧನಲಕ್ಷ್ಮೀ ಪರಿವಾರ, ಇಂಫಾಲ (ಮಣಿಪುರ)

**23-03-2025 ಭಾನುವಾರ**

### 108 ಕಲಶಗಳ ಮಹಾಭಿಷೇಕ ಮತ್ತು ಸಂಘ ಪೂಜೆ (ಗುಡ್ಡದ ಬಸದಿ)

ಬೆಳಿಗ್ಗೆ 11-00ರಿಂದ

ನಿತ್ಯವಿಧಿ ಸಹಿತ,
ತ್ರಿಕೂಟ ಜಿನಾಲಯದ
(ಗುಡ್ಡದ ಬಸದಿಯ) ಭಗವಾನ್
ಶ್ರೀ ಪಾರ್ಶ್ವನಾಥಸ್ವಾಮಿಗೆ ಮಹಾಭಿಷೇಕ

ಸೇವಾಕರ್ತರುಗಳು :
ಶ್ರೀಮತಿ ರೂಪಲ್ ಜೈನ್ ಮತ್ತು ಶ್ರೀ ರಜನೀಶ್ ಜೈನ್
ಬೆಂಗಳೂರು

**24-03-2025 ಸೋಮವಾರ**

### ಕುಂಕುಮೋತ್ಸವ ಧ್ವಜಾವರೋಹಣ

ನಿತ್ಯವಿಧಿ

ಸೇವಾಕರ್ತರುಗಳು :
ಶ್ರೀ ಮನೋಜ್‌ಕುಮಾರ ಪಾಟ್ನಿ, ಶ್ರೀಮತಿ ಸಂಗೀತಾ ಪಾಟ್ನಿ
ಸಂಗೀತಾ ಟೆಕ್ಸ್‌ಟೈಲ್ಸ್, ಇಂಫಾಲ (ಮಣಿಪುರ)

21-03-2025 ಪುಷ್ಪರಥೋತ್ಸವದ ಸಂಜೆಯ ಉಪಹಾರದ ಸೇವಾಕರ್ತರು :
ಶ್ರೀಮತಿ ನಾಗರತ್ನಮ್ಮ, ಶ್ರೀ ವಿ.ಪಿ. ಶಾಂತರಾಜ್, ಶ್ರೀಮತಿ ಮೇಘ ಸಿದ್ಧಾರ್ಥ ಮತ್ತು ಮೊಮ್ಮಕ್ಕಳು, ಶಿವಮೊಗ್ಗ
23-03-2025ರ ಭಾನುವಾರ (ಮಹಾಭಿಷೇಕದ ದಿವಸ) ಬೆಳಗಿನ ಉಪಹಾರದ ವ್ಯವಸ್ಥೆಯನ್ನು ಕೊಪ್ಪಳ ಜಿಲ್ಲಾ ಜೈನ ಸಮಾಜದ ವತಿಯಿಂದ ಏರ್ಪಡಿಸಲಾಗಿದೆ.
23-03-2025ನೇ ದಿವಸದ ಅಗ್ರೋಧಕ ಸೇವೆ : ಶ್ರೀ ರವಿರಾಜ್, ಶ್ರೀಮತಿ ಚೂಡಾಮಣಿ ಮತ್ತು ಮಕ್ಕಳು, ಬೆಂಗಳೂರು
ತ್ಯಾಗಿಗಳ ಆಹಾರ ದಾನದ ವ್ಯವಸ್ಥೆ : ಶ್ರೀ ರವಿಕಿರಣ ಬಾಬುಗೊಂಡ ಪಾಟೋರೆ, ಸಾ॥ ಸಾಂಗ್ಲಿ, ಮಹಾರಾಷ್ಟ್ರ ಇವರಿಂದ
ಸರ್ವ ವಾದ್ಯ ಸೇವೆ : ಶ್ರೀಮತಿ ಪ್ರಜ್ವಲಾ ನೀಲಜಗಿ, ಶ್ರೀ ಮಹಾವೀರ್ ವಸಂತ್ ನೀಲಜಗಿ ಮತ್ತು ಪರಿವಾರ, ಅಧ್ಯಕ್ಷರು, ಮಹಾವೀರ ಶಿಕ್ಷಣ ಸಂಸ್ಥೆ, ಹುಕ್ಕೇರಿ
ಪುಷ್ಪಾಲಂಕಾರ ಸೇವೆ : ಶ್ರೀಮತಿ ಜ್ವಾಲಿನಿ, ಶ್ರೀ ಶರತ್‌ಕುಮಾರ್, ಬೆಂಗಳೂರು

ವಿ.ಸೂ. : ಭಕ್ತಾದಿಗಳು ತಮ್ಮ ಕಾಣಿಕೆಯನ್ನು ಎಂ.ಓ/ಬ್ಯಾಂಕ್ ಡ್ರಾಫ್ಟ್/ಚೆಕ್ ಮೂಲಕ ಕಳುಹಿಸಿಕೊಡಬಹುದು
NEFT/RTGS ಮೂಲಕ ಕಾಣಿಕೆ ಸಂದಾಯಕ್ಕಾಗಿ : Sri Hombuja Jain Math
S.B. A/c No : 3182500101025001 with Karnataka Bank, Humcha Br. IFSC Code : KARB0000318

ಆಡಳಿತಾಧಿಕಾರಿ
ಶ್ರೀ ಹೊಂಬುಜ ಜೈನಮಠ
shrihombuja@gmail.com
M : 9483801460

ಶ್ರೀ ಹೊಂಬುಜ ಜೈನಮಠ, ಅಂಚೆ : ಹುಂಚ - 577 436 ಹೊಸನಗರ ತಾ॥, ಶಿವಮೊಗ್ಗ ಜಿಲ್ಲೆ ಫೋನ್ : 08185-262722, 9481453653

KARNATAKA BANK
SCAN QR CODE TO PAY


# ಗುರುದೇವ

GURUDEVA MONTHLY
RNI No. 13248/57-POSTEL REGD No. KA/SK/SMG 198/2024-26
Date of Posting 17th of every month. Sub Post office, Humcha - 577436

ವಾರ್ಷಿಕ ಚಂದಾ : ರೂಪ್ಯಾ 150-00 ಮತ್ತು ಆಜೀವ ಸದಸ್ಯತ್ವಕ್ಕೆ : ರೂಪ್ಯಾ 1000-00 ಮಾತ್ರ.

ವ್ಯವಸ್ಥಾಪಕರು, "ಗುರುದೇವ" ಕಾರ್ಯಾಲಯ, ಅಂಚೆ : ಹೊಂಬುಜ, ಶಿವಮೊಗ್ಗ-ಜಿಲ್ಲೆ, ಕರ್ನಾಟಕ-೫೭೭೪೩೬

Edited, Published & Printed by Sri C.D. Ashok Kumar, on behalf of Swasthishree Devendrakeerthi Bhattaraka Pattacharyavarya Swamiji, Sri Hombuja Jain Math
Printed at Sri Mahaveer Printing Press, J.P.N. Road, Durgigudi, Shimoga (Ph: 08182- 222044) and Published at Gurudeva Karyalaya Sri Hombuja Jain Math
Post: Humcha, Tq. Hosanagar., Dist. Shimoga-577436 Ph : 08185-262722